## ಯೂನಿಟ್ - 1

# ಅಂದದ ಮನೆ

### ಪೀಠಿಕೆ

ಮನೆಯು ಮಗುವಿಗೆ ಪ್ರೀತಿವಾತ್ಸಲ್ಯವನ್ನು ನೀಡುವ, ಆತ್ಮವಿಶ್ವಾಸ ತುಂಬುವ ಕುಟುಂಬದ ಸದಸ್ಯರನ್ನೊಳಗೊಂಡ ತಾಣವಾಗಿದೆ. ಅಂದದ ಮನೆ ಎಂಬ ಘಟಕದಲ್ಲಿ, ಹಲವು ವಿಧದ ಮನೆಗಳು, ಮನೆಯ ಅವಶ್ಯಕತೆ, ಮನೆಯಲ್ಲಿರುವ ಕೋಣೆಗಳು (ಶೌಚಾಲಯ, ಬಚ್ಚಲು ಮನೆ ಇತ್ಯಾದಿ) ಇತರ ಸೌಕರ್ಯಗಳು, ಗೃಹೋಪಕರಣಗಳು, ಇತರ ಜೀವಿಗಳ ವಾಸಸ್ಥಳಗಳು ಎಂಬೀ ವಿಷಯಗಳ ಕುರಿತು ಹೇಳಲಾಗಿದೆ. ಅಲ್ಲದೆ ಕುಟುಂಬದ ಸದಸ್ಯರು, ಅವರ ಜವಾಬ್ದಾರಿಗಳು, ಕೌಟುಂಬಿಕ ಸಂಬಂಧ, ಜೀವನ ಕೌಶಲ, ಶಿಕ್ಷಣ ಎಂಬಿವುಗಳ ಬಗ್ಗೆಯೂ ವಿವರಿಸಲಾಗಿದೆ. ಈ ಎಲ್ಲಾ ಆಶಯಗಳನ್ನು ವಿದ್ಯಾರ್ಥಿಗಳಲ್ಲಿ ಮೂಡಿಸಬೇಕಾಗಿದೆ.

ಅರುಣ ಮತ್ತು ಚಿನ್ನು ಗಿಳಿಮರಿಯ ಕಥೆಯಿಂದ ಈ ಘಟಕ ಆರಂಭವಾಗುತ್ತದೆ. ಬಾಷಾ ಕಲಿಕೆಗೆ ಸಂಬಂಧಿಸಿ ಅನೌಪಚಾರಿಕ ಸಂಭಾಷಣೆ, ಓದುವಿಕೆ, ಬರವಣಿಗೆ, ಅಭಿನಯ, ಚಿತ್ರರಚನೆ, ಪದ್ಯ, ಚಿತ್ರಕಥೆ ಎಂಬಿವುಗಳನ್ನು ನೀಡಲಾಗಿದೆ. ಈ ಘಟಕದಲ್ಲಿ ಮಗು ಸ್ವಾಯತ್ತಗೊಳಿಸಬೇಕಾದ ಅ, ಇ, ಎ, ಒ, ರ, ಗ, ಚ, ಮ ಎಂಬೀ ಅಕ್ಷರಗಳನ್ನು ಬಳಸಿಕೊಂಡು ಸೂಕ್ತ ಪದಗಳನ್ನು ಬರೆಯುವ ಚಟುವಟಿಕೆಯನ್ನು ಘಟಕದ ಕೊನೆಯಲ್ಲಿ ನೀಡಲಾಗಿದೆ. ಪರಿಸರ ಕಲಿಕೆಯಲ್ಲಿ ನಿರೀಕ್ಷಣೆ ಮತ್ತು ವರ್ಗೀಕರಣ ಎಂಬೀ ಪ್ರಕ್ರಿಯಾ ಸಾಮರ್ಥ್ಯಗಳನ್ನು ವಿಕಾಸಗೊಳಿಸುವ ಚಟುವಟಿಕೆಗಳಿವೆ. ಗಣಿತಕ್ಕೆ ಪ್ರತ್ಯೇಕವಾಗಿ ಪುಸ್ತಕವಿದ್ದರೂ ಗಣಿತದ ಆಶಯಗಳಾದ, ಮೇಲೆ - ಕೆಳಗೆ, ದೂರ - ಹತ್ತಿರ, ಹೆಚ್ಚು - ಕಡಿಮೆ, ಒಳಗೆ - ಹೊರಗೆ, ಉದ್ದ - ಗಿಡ್ಡ, ಸಣ್ಣದು - ದೊಡ್ಡದು ಎಂಬಿವುಗಳನ್ನು ಈ ಘಟಕದ ಆಶಯದೊಂದಿಗೆ ಸಂಯೋಜಿಸಬೇಕಾಗಿದೆ.

ನಿರ್ಮಾಣ ಚಟುವಟಿಕೆ, ಚಿತ್ರರಚನೆ ಎಂಬಿವುಗಳಿಗೆ ಪೂರಕವಾದ ಚಟುವಟಿಕೆಗಳನ್ನು ಈ ಘಟಕದಲ್ಲಿ ನೀಡಲಾಗಿದೆ.

## ಭಾಷೆ

| ಆಶಯಗಳು | ವ್ಯವಹಾರ ರೂಪಗಳು/ಅಕ್ಷರಗಳು/ ಕಾಗುಣಿತಗಳು/ಭಾಷಾಸತ್ಯಾಂಶಗಳು | ಕಲಿಕೆಯ ಸಾಧನೆಗಳು |
|---|---|---|
| • ಆಸಕ್ತಿದಾಯಕವಾದ ಘಟನೆಗಳು, ಕಥಾ ಪಾತ್ರಗಳು ಎಂಬಿವುಗಳನ್ನೊಳಗೊಂಡ ಚಿತ್ರಗಳನ್ನೂ ಓದಿ ತಿಳಿದ ವಿಚಾರಗಳನ್ನು ಬಾಯ್ದೆರೆಯಾಗಿ ಪ್ರಕಟಿಸುವುದು.<br>• ಆಲಿಸಿದ ಪದ್ಯವನ್ನು ತನ್ನದಾದ ರೀತಿಯಲ್ಲಿ ಹಾಡುವುದು. (ರಾಗ, ತಾಳ)<br>• ಓದುವ ಸಾಮಗ್ರಿಗಳಿಂದ ಅಕ್ಷರಗಳನ್ನು ಪದಗಳನ್ನು ಗುರುತಿಸಿ ವಾಕ್ಯಗಳನ್ನು, ವಿವರಣೆಗಳನ್ನು ಓದುವುದು. | • ಚಿತ್ರ, ಓದು<br>• ಅನೌಪಚಾರಿಕ ಸಂಭಾಷಣೆ<br>• ಬಾಯ್ದೆರೆ ಓದು, ಆಶಯಗ್ರಹಣ ಓದು<br>• ಪದ ಮತ್ತು ವಾಕ್ಯಗಳು | • ಚಿತ್ರ ಮತ್ತು ಆಖ್ಯಾನಕ್ಕೆ ಸಂಬಂಧಿಸಿದ ವಿಚಾರಗಳನ್ನು ಸ್ವಂತವಾಗಿ ಪ್ರಕಟಿಸುತ್ತಾನೆ/ಳೆ.<br>• ರಾಗತಾಳದೊಂದಿಗೆ ಹಾಡುತ್ತಾನೆ/ಳೆ. |

| ಆಶಯಗಳು | ವ್ಯವಹಾರ ರೂಪಗಳು/ಅಕ್ಷರಗಳು/ ಕಾಗುಣಿತಗಳು/ಭಾಷಾಸತ್ಯಾಂಶಗಳು | ಕಲಿಕೆಯ ಸಾಧನೆಗಳು |
|---|---|---|
| • ಅಕ್ಷರಗಳನ್ನು ಕ್ರಮವಾಗಿ ಬರೆದು ಅರ್ಥವತ್ತಾದ ಪದ ಮತ್ತು ವಾಕ್ಯವನ್ನು ಬರೆಯುವುದು<br>• ಉಚ್ಚಾರ ಸ್ಪಷ್ಟತೆಯೊಂದಿಗೆ ಪದಗಳು ಮತ್ತು ಸರಳವಾಕ್ಯಗಳನ್ನು ಓದುವುದು. | | |

# ಪರಿಸರ

| ಆಶಯಗಳು | ಪ್ರಕ್ರಿಯಾ ಸಾಮರ್ಥ್ಯ | ಕಲಿಕಾ ಸಾಧನೆಗಳು |
|---|---|---|
| • ನಮಗೆ ವಾಸಿಸಲು ಮನೆ ಬೇಕು.<br>• ಮನೆಯಲ್ಲಿ ವಿವಿಧ ಅಗತ್ಯಗಳಿಗಾಗಿ ಪ್ರತ್ಯೇಕ ಕೋಣೆಗಳೂ ಇತರ ಸೌಕರ್ಯಗಳೂ (ಬಚ್ಚಲು ಮನೆ, ಶೌಚಾಲಯ) ಇವೆ.<br>• ಹಲವು ವಿಧದ ಗೃಹೋಪಕರಣಗಳಿವೆ.<br>• ಕುಟುಂಬದಲ್ಲಿರುವ ಪ್ರತಿಯೊಬ್ಬರಿಗೂ ಜವಾಬ್ದಾರಿಗಳಿವೆ. | • ಚಿತ್ರ ನಿರೀಕ್ಷಣೆ<br>• ಚರ್ಚೆ - ಅನುಭವ ಹಂಚುವಿಕೆ<br>• ಚಿತ್ರ ನಿರೀಕ್ಷಣೆ, ಬಾಯ್ದೆರೆ ಪಟ್ಟಿ, ವರ್ಗೀಕರಣ<br>• ಚಿತ್ರ ನಿರೀಕ್ಷಣೆ, ಬಾಯ್ದೆರೆ ಮಂಡನೆ, ಅನುಭವ ಹೇಳುವುದು.<br>• ಚಿತ್ರ ನಿರೀಕ್ಷಣೆ, ಬಾಯ್ದೆರೆ ಮಂಡನೆ, ಪಟ್ಟಿ ಮಾಡುವುದು. (ವಿವಿಧ ಮನೆಗಳು) | • ಮನೆಯ ಹಲವು ಪ್ರಯೋಜನಗಳನ್ನು ಗುರುತಿಸಿ ಹೇಳುತ್ತಾನೆ/ಳೆ.<br>• ಮನೆಗಳಲ್ಲಿರುವ ಕೋಣೆಗಳ ಕುರಿತು ಇತರ ಸೌಕರ್ಯಗಳ ಕುರಿತು ಬಾಯ್ದೆರೆಯಾಗಿ ಹೇಳುತ್ತಾನೆ/ಳೆ.<br>• ಗೃಹೋಪಕರಣಗಳನ್ನು ಗುರುತಿಸುತ್ತಾನೆ/ಳೆ.<br>• ಚಿತ್ರ ನೋಡಿ ಇತರ ಉಪಕರಣಗಳನ್ನು ಮತ್ತು ಗೃಹೋಪಕರಣಗಳನ್ನು ವರ್ಗೀಕರಿಸುತ್ತಾನೆ/ಳೆ.<br>• ಕುಟುಂಬದಲ್ಲಿರುವ ಪ್ರತಿಯೊಬ್ಬರ ಜವಬ್ದಾರಿಯನ್ನು ಹೇಳುತ್ತಾನೆ/ಳೆ. |

| ಆಶಯಗಳು | ಪ್ರಕ್ರಿಯಾ ಸಾಮರ್ಥ್ಯ | ಕಲಿಕಾ ಸಾಧನೆಗಳು |
| --- | --- | --- |
| • ಕುಟುಂಬದ ಸದಸ್ಯರು ಒಟ್ಟುಗೂಡುವ ಹಲವಾರು ಸಂದರ್ಭಗಳಿವೆ.<br>• ಇತರ ಜೀವಿಗಳಿಗೂ ವಾಸಸ್ಥಳಗಳಿವೆ.<br>• ಹಲವು ವಿಧದ ಮನೆಗಳಿವೆ. | • ಚರ್ಚೆ<br>• ಚಿತ್ರ ನಿರೀಕ್ಷಣೆ<br>• ಬಯಲು ಪ್ರವಾಸ | • ಕುಟುಂಬದ ಸದಸ್ಯರು ಒಟ್ಟುಗೂಡುವ ಸಂದರ್ಭವನ್ನು ಹೇಳುತ್ತಾನೆ/ಳೆ.<br>• ಇತರ ಜೀವಿಗಳ ವಾಸಸ್ಥಳಗಳನ್ನು ಗುರುತಿಸುತ್ತಾನೆ/ಳೆ.<br>• ಪರಿಸರದಲ್ಲಿರುವ ವಿವಿಧ ರೀತಿಯ ಮನೆಗಳನ್ನು ಗುರುತಿಸುತ್ತಾನೆ/ಳೆ. |

**ಕಲಿಕೆಯ ಸಾಮಗ್ರಿಗಳು :**

ಚಾರ್ಟು, ಸ್ಕೆಚ್‌ಪೆನ್, ಚಿತ್ರಗಳು, ಸಂಪನ್ಮೂಲ ಸಿಡಿ ಇತ್ಯಾದಿ

**ಸಮಯ :** 40 ಪಿರಿಯಡ್

## ಚಿತ್ರ ಓದುವಿಕೆ

- ಚಿತ್ರವನ್ನು ಓದುವ ಪಠ್ಯವಾಗಿಯೂ ಓದುವಿಕೆಗೆ ಪೂರಕ ಚಟುವಟಿಕೆಯಾಗಿಯೂ ಪರಿಗಣಿಸಬೇಕು.
- ಚಿತ್ರನೋಡಿ ವಸ್ತುಗಳು, ಘಟನೆಗಳು, ವ್ಯಕ್ತಿಗಳು ಎಂಬಿವುಗಳ ಕುರಿತು ಹೇಳಲು
- ಚಿತ್ರದ ಆಧಾರದಲ್ಲಿ ಪ್ರಶ್ನೆಗಳನ್ನು ಕೇಳಲು.
- ಚಿತ್ರನೋಡಿ ಅನೌಪಚಾರಿಕ ಸಂಭಾಷಣೆ ನಡೆಸಲು.
- ಚಿತ್ರಗಳನ್ನು ಪರಸ್ಪರ ಹೋಲಿಸಲು.
- ಕಥಾಪಾತ್ರಗಳಿಗೆ ಹೆಸರು ಕೊಡಲು.
- ಊಹಿಸಿ ಹೇಳಲು. (ತನ್ನ ಪೂರ್ವಾನುಭವಗಳೊಂದಿಗೆ ಹೊಂದಿಸುವುದು)
- ಚಿತ್ರನೋಡಿ ಕಥೆ ಹೇಳಲು.
- ಚಿತ್ರದಲ್ಲಿರುವ ಕಥಾಪಾತ್ರಗಳೊಳಗಿನ ಸಂಭಾಷಣೆಯನ್ನು ಊಹಿಸಿ ಹೇಳಲು.
- ಚಿತ್ರದ ಮೂಲಕ ಗಣಿತ ಆಶಯಗಳಾದ ಹೆಚ್ಚು - ಕಡಿಮೆ, ದೊಡ್ಡದು - ಸಣ್ಣದು, ಹತ್ತಿರ - ದೂರ, ಮೇಲೆ - ಕೆಳಗೆ ಇವುಗಳನ್ನು ರೂಪೀಕರಿಸಲು.
- ಅಭಿನಯಿಸಲು
- 
- 

ಇದೇ ರೀತಿ ಇನ್ನೂ ಹಲವು ಸಾಧ್ಯತೆಗಳನ್ನು ಕಂಡುಕೊಳ್ಳಬಹುದಲ್ಲವೇ?

ಮಕ್ಕಳು ಪಾಠಪುಸ್ತಕದ ಅಂದದ ಮನೆ ಘಟಕದ ಆರಂಭದಲ್ಲಿ ನೀಡಿರುವ ಚಿತ್ರಗಳನ್ನು ನಿರೀಕ್ಷಣೆ ಮಾಡಲಿ.

- ಚಿತ್ರ ನಿರೀಕ್ಷಣೆ ಮಾಡಿ ವಸ್ತುಗಳು, ಘಟನೆಗಳು, ವ್ಯಕ್ತಿಗಳು ಎಂಬಿವುಗಳ ಕುರಿತು ಹೇಳುವುದು.
- ಚಿತ್ರದ ಆಧಾರದಲ್ಲಿ ಪ್ರಶ್ನೆಗಳನ್ನು ಕೇಳುವುದು. ಅನೌಪಚಾರಿಕ ಸಂಭಾಷಣೆ ನಡೆಸುವುದು.
- ಆರಂಭದಲ್ಲಿ ಮಗುವಿಗೆ ಪರಿಚಿತವಾದ ಮನೆ, ಪರಿಸರ, ಮನೆಯ ಸದಸ್ಯರ ಕುರಿತು ಅನೌಪಚಾರಿಕ ಸಂಭಾಷಣೆ ನಡೆಸುವುದು.
- ಪಾಠಪುಸ್ತಕದ 'ಅಂದದ ಮನೆ' ಘಟಕದ ಆರಂಭದಲ್ಲಿ ನೀಡಿರುವ ಚಿತ್ರಗಳು ಹಲವಾರು ವಿಚಾರಗಳನ್ನು ಒಳಗೊಂಡಿವೆ. ಈ ಚಿತ್ರಗಳು ಮುಂದಿನ ಪಾಠಗಳಿಗೂ ಉಪಯೋಗಪ್ರದವಾಗಿದೆ. ಉದಾ: ಹೂ ಹಣ್ಣು, ಹಬ್ಬದ ಸಡಗರ, ಶುಚಿ-ರುಚಿ.
- ಚಿತ್ರ ಓದುವಿಕೆ ಎಂಬ ಚಟುವಟಿಕೆಯಲ್ಲಿ ಪೂರಕ ಪ್ರಶ್ನೆಗಳನ್ನು ಕೇಳುವ ಮೂಲಕ ಮಕ್ಕಳ ಮಾತುಗಾರಿಕೆಗೆ ಸಾಕಷ್ಟು ಅವಕಾಶಗಳನ್ನು ನೀಡುವುದು.

### *ಚಿತ್ರ ಓದುವಿಕೆಗೆ ಪೂರಕ ಪ್ರಶ್ನೆಗಳು :*

- ❖ ಚಿತ್ರದಲ್ಲಿ ಏನೇನು ಕಾಣಿಸುತ್ತವೆ?
- ❖ ಚಿತ್ರದಲ್ಲಿ ಯಾರು ಯಾರು ಇದ್ದಾರೆ?
- ❖ ಅವರು ಏನು ಮಾಡುತ್ತಿದ್ದಾರೆ?
- ❖ ಚಿತ್ರದಲ್ಲಿ ಯಾವ ಯಾವ ಜೀವಿಗಳಿವೆ?
- ❖ ಮನೆಗಳಲ್ಲಿ ಯಾವ ಯಾವ ಜೀವಿಗಳನ್ನು ಸಾಕುತ್ತಾರೆ?

***ಗಣಿತಾಶಯಕ್ಕೆ ಪೂರಕ ಪ್ರಶ್ನೆಗಳು :***

- ಹಕ್ಕಿಗಳು ಎಲ್ಲಿವೆ? ಆಡುಗಳು ಎಲ್ಲಿವೆ? (ಮೇಲೆ/ಕೆಳಗೆ)
- ವ್ಯಾಪಾರಿ ಎಲ್ಲಿ ಕುಳಿತಿದ್ದಾರೆ? (ಒಳಗೆ/ಹೊರಗೆ)
- ಚಿತ್ರದಲ್ಲಿರುವ ಮರಗಳಲ್ಲಿ ಯಾವುದು ಎತ್ತರ? ಯಾವುದು ಎತ್ತರ ಕಡಿಮೆ? (ಎತ್ತರ/ಎತ್ತರ ಕಡಿಮೆ)
- ಕೋಳಿ ಮತ್ತು ಕೋಳಿಮರಿಗಳಲ್ಲಿ ಯಾವುದು ಹೆಚ್ಚು? ಯಾವುದು ಕಡಿಮೆ? (ಹೆಚ್ಚು/ಕಡಿಮೆ)
- ಆಡು ಮತ್ತು ದನಗಳು (ಹೆಚ್ಚು/ಕಡಿಮೆ)

ಇಲ್ಲಿ ರೂಪಿಸಿದ ಗಣಿತಾಶಯಗಳನ್ನು ಗಣಿತ ಪುಸ್ತಕದ ಚಟುವಟಿಗಳನ್ನು ನೀಡುವ ಸಂದರ್ಭದಲ್ಲಿ ನೆನಪಿಸಬೇಕು.

ಪಾಠಪುಸ್ತಕದ ಮೂರನೇ ಪುಟದಲ್ಲಿರುವ ಚಿತ್ರವನ್ನು ಮಕ್ಕಳು ನಿರೀಕ್ಷಿಸಲಿ.

- ಚಿತ್ರದಲ್ಲಿ ಯಾರು ಯಾರು ಇದ್ದಾರೆ?
- ಹುಡುಗನ ಹೆಸರೇನು?
- ಅವನು ಏನು ಮಾಡುತ್ತಿದ್ದಾನೆ?

– ಮೊದಲಾದ ಪ್ರಶ್ನೆಗಳನ್ನು ಕೇಳಿ ಕಥಾಪಾತ್ರವನ್ನು ಅರುಣ ಎಂದು ಪರಿಚಯಿಸುವುದು. ಅನಂತರ ಪಾಠಪುಸ್ತಕದ ಆಖ್ಯಾನವನ್ನು ಅಧ್ಯಾಪಿಕೆ ಓದುವುದು.

ಆಖ್ಯಾನದ ಕೊನೆಗೆ ಕೊಟ್ಟಿರುವ 'ನಿನ್ನ ಮನೆಯಲ್ಲಿ ಯಾರು ಯಾರು ಇದ್ದಾರೆ?' ಎಂಬ ಗಿಳಿಮರಿಯ ಪ್ರಶ್ನೆಗೆ ಅರುಣ ಏನು ಹೇಳಿರಬಹುದು? ಎಂದು ಮಕ್ಕಳಿಂದ ಹೇಳಿಸುವುದು.

## ಓದುವ

'ಮನೆ ಮನೆ ನನ್ನ ಮನೆ' ಪಾಠಭಾಗವನ್ನು ಕರಿಹಲಗೆಯಲ್ಲಿ ಅಥವಾ ಚಾರ್ಟ್‌ನಲ್ಲಿ ಬರೆದು ತರಗತಿಯಲ್ಲಿ ಪ್ರದರ್ಶಿಸುವುದು. ಅಧ್ಯಾಪಿಕೆ Pointer ಸಹಾಯದಿಂದ ಓದುವುದು. ಮಕ್ಕಳು ಗಮನಿಸುವುದು. **'ಮನೆ' ಎಂಬ ಪದ ಗುರುತಿಸಿ ಓದುವುದು ಮತ್ತು ಬರೆಯುವುದು. ಮುಂದಿನ ಚಟುವಟಿಕೆಯಾದುದರಿಂದ, ಕರಿಹಲಗೆಯಲ್ಲಿ ಮನೆಯನ್ನು ಬೇರೆ ಬಣ್ಣದಲ್ಲಿ ಬರೆಯುವುದು ಒಳಿತು.**

ಅಧ್ಯಾಪಿಕೆ ಪಾಠಪುಸ್ತಕದ ಸಹಾಯದಿಂದ ಓದುವಾಗ ಮಕ್ಕಳು ತಮ್ಮ ಪಾಠಪುಸ್ತಕವನ್ನು ಗಮನಿಸಲಿ. ಆ ಮೇಲೆ ಮಕ್ಕಳು ವೈಯಕ್ತಿಕವಾಗಿ/ಗುಂಪಿನಲ್ಲಿ ಓದಲಿ.

- ಅಧ್ಯಾಪಿಕೆ ರಾಗವಾಗಿ ಹಾಡುವುದು.
- ಮಕ್ಕಳು ಗುಂಪಿನಲ್ಲಿ ಹಾಡಲಿ.

## ಮೌಲ್ಯಮಾಪನ

- ♦ ಯಾವ ಗುಂಪು ಹಾಡಿದ್ದು ಉತ್ತಮವಾಗಿತ್ತು?
- ♦ ಗುಂಪಿನಲ್ಲಿ ಎಲ್ಲರೂ ಹಾಡಿದ್ದಾರೆಯೇ?
- ♦ ಎಲ್ಲರೂ ಒಟ್ಟಿಗೆ ಆರಂಭಿಸಿ, ಒಟ್ಟಿಗೆ ಮುಕ್ತಾಯಗೊಳಿಸಿದ್ದಾರೆಯೇ? ಇತ್ಯಾದಿ.
- ♦ ಮಕ್ಕಳು ಮೌಲ್ಯಮಾಪನ ಹಾಡಲಿ.

**ಚಿತ್ರ ಓದು :**

ಪಾಠಪುಸ್ತಕದಲ್ಲಿ ಕೊಟ್ಟಿರುವ ಚಿತ್ರದಲ್ಲಿರುವವರನ್ನು ಕುರಿತು ಮಕ್ಕಳಲ್ಲಿ ಕೆಲವರಿಂದ ಬಾಯ್ದೆರೆಯಾಗಿ ಹೇಳಿಸುವುದು. ಆಮೇಲೆ ತರಗತಿಗೆ ಒಟ್ಟಾಗಿ 'ಅರುಣನ ಮನೆಯಲ್ಲಿ ಯಾರು ಯಾರು ಇದ್ದಾರೆ?' ಎಂಬ ಪಾಠಭಾಗದ ಪ್ರಶ್ನೆಯನ್ನು ಕೇಳುವುದು.

ಆಖ್ಯಾನ ಮಂಡನೆಯ ನಂತರ, ಆಖ್ಯಾನದೊಂದಿಗೆ ನೀಡಿರುವ ಚಿತ್ರದ ಕುರಿತು ಪ್ರಶ್ನೆಗಳನ್ನು ಕೇಳುವುದು.

- ಇದು ಯಾರ ಮನೆ?
- ಮನೆಯ ಬಳಿ ಏನಿದೆ?
- ಮನೆ ಹೇಗಿದೆ?

**ಓದುವ :**

ಮಕ್ಕಳು ಬಾಯ್ದೆರೆಯಾಗಿ ಹೇಳಿದ ಉತ್ತರಗಳು ಓದುವ ಚಟುವಟಿಕೆಯಾಗುತ್ತವೆ. ಅಧ್ಯಾಪಿಕೆ ಈ ವಾಕ್ಯಗಳನ್ನು ಕರಿಹಲಗೆಯಲ್ಲಿ ಬರೆಯುವುದು. 'ಮರ' ಎಂಬ ಪದವನ್ನು ದೊಡ್ಡದಾಗಿ ಅಥವಾ ಬಣ್ಣದಲ್ಲಿ ಪ್ರತ್ಯೇಕವಾಗಿ ಗುರುತಿಸುವುದು. 'ಮರ' ಎಂಬ ಪದವನ್ನು ಮಗು ಈ ಘಟಕದಲ್ಲಿ ಬರೆಯಬೇಕಾದುದರಿಂದ ಈ ಪದದ ಹೆಚ್ಚಿನ ಪರಿಚಯ ಮಗುವಿಗೆ ಆಗಬೇಕಾಗಿದೆ. '**ಮರ**ದ ಬಳಿ **ಮನೆ**' ಎಂದು sentence stripನಲ್ಲಿ ಬರೆದು ಪ್ರತಿ ಗುಂಪಿಗೂ ನೀಡಿ ಓದಿಸುವುದು.

**ಹಾಡುವ, ಅಭಿನಯಿಸುವ**

ಪದ್ಯವನ್ನು chartನಲ್ಲಿ ಬರೆದು ತೂಗುಹಾಕುವುದು. ಪ್ರತಿಯೊಂದು ಪದವನ್ನು ತೋರಿಸುತ್ತಾ ಅಧ್ಯಾಪಿಕೆ ಓದುವುದು. ಮಕ್ಕಳು ಗಮನಿಸಲಿ. ಅನಂತರ ರಾಗವಾಗಿ ಹಾಡುವುದು. ಮಕ್ಕಳು ಪುಸ್ತಕ ನೋಡಿ Graphic Reading ನಡೆಸಲಿ. ಆಮೇಲೆ ಅಧ್ಯಾಪಿಕೆ ಪದ್ಯವನ್ನು ಹಾಡಿ ಅಭಿನಯಿಸುವುದು. ಮಕ್ಕಳು ಅನುಕರಿಸಲಿ. ಮಕ್ಕಳು ಸ್ವತಃ ಗುಂಪಿನಲ್ಲಿ ಹಾಡಿ ಅಭಿನಯಿಸಲಿ. ಅಗತ್ಯವಿದ್ದಲ್ಲಿ ಅಧ್ಯಾಪಿಕೆ ಸಹಾಯ ಮಾಡುವುದು. ಒಂದು ಗುಂಪು ಹಾಡುವಾಗ ಇತರ ಗುಂಪುಗಳು ಮೌಲ್ಯನಿರ್ಣಯ ಮಾಡಲಿ.

ಗುಂಪಿನ ಮೌಲ್ಯಮಾಪನ ನಡೆಸುವುದು.

ಯಾವ ಗುಂಪಿನ ಹಾಡು/ಅಭಿನಯ ಉತ್ತಮವಾಗಿತ್ತು? ಯಾಕೆ? ಮಕ್ಕಳು ಹೇಳಿದ ಮೌಲ್ಯಮಾಪನ ಸೂಚಕಗಳನ್ನು ಅಧ್ಯಾಪಿಕೆ ಸರಿಪಡಿಸಿ ಹೇಳುವುದು.

## ಚುಕ್ಕಿ ಚಿತ್ರ - ಬಣ್ಣ ಹಚ್ಚುವುದು

Big canvasನಲ್ಲಿ ಮನೆಯ ದೊಡ್ಡದಾದ ಚುಕ್ಕಿ ಚಿತ್ರವನ್ನು ಹಾಕುವುದು. ಚಿತ್ರದ ಒಂದೆರಡು ಚುಕ್ಕಿಗಳನ್ನು Sketch penನ ಸಹಾಯದಿಂದ ಅಧ್ಯಾಪಿಕೆ ಜೋಡಿಸಿ ತೋರಿಸುವುದು. ಆಮೇಲೆ ಮಕ್ಕಳು ತಮ್ಮ ಪುಸ್ತಕದ ಚಿತ್ರದಲ್ಲಿ ಗೆರೆ ಎಳೆದು ಜೋಡಿಸಲಿ. ಚಿತ್ರಕ್ಕೆ ಬಣ್ಣ ಹಚ್ಚುವಾಗ ಚಿತ್ರದಿಂದ ಬಣ್ಣ ಹೊರಗೆ ಹೋಗದಂತೆ ಮಕ್ಕಳಿಗೆ ಸೂಚನೆ ನೀಡುವುದು. ಅಧ್ಯಾಪಿಕೆ ಸ್ವತಃ Big canvas ನ ಚಿತ್ರಕ್ಕೆ ಬಣ್ಣ ಹಚ್ಚುವುದನ್ನು ಮಕ್ಕಳು ಗಮನಿಸಲಿ.

## ಚಿತ್ರ ನೋಡಿ ಬರೆಯುವ

ಚಿತ್ರವನ್ನು ನೋಡಿ ಮಕ್ಕಳು ಬಾಯ್ದೆರೆಯಾಗಿ 'ಮನೆ' 'ಮರ' ಎಂದು ಹೇಳಲಿ. ಮಕ್ಕಳು ಹೇಳುತ್ತಿರುವಾಗ ಅಧ್ಯಾಪಿಕೆ ಆ ಪದಗಳನ್ನು ಕರಿಹಲಗೆಯಲ್ಲಿ ಬರೆಯುವುದು. ಮಕ್ಕಳು ಅಧ್ಯಾಪಿಕೆಯ ಬರವಣಿಗೆಯನ್ನು ಗಮನಿಸಲಿ. 'ಮನೆ', 'ಮರ' ಬರೆದ ಕಾರ್ಡುಗಳನ್ನು ಗುಂಪಿನಲ್ಲಿ ನೀಡುವುದು. ಮಕ್ಕಳು ನೋಡಿ ತಮ್ಮ ಪಾಠಪುಸ್ತಕದಲ್ಲಿ ಬರೆಯಲಿ. ವೈಯಕ್ತಿಕವಾಗಿ ಓದಲಿ. ಇಲ್ಲಿ ಮಕ್ಕಳ Graphic writingನ್ನು ವೈಯಕ್ತಿಕ ಮೌಲ್ಯಮಾಪನ ಮಾಡಬೇಕು.

### Graphic Writingನ ಮೌಲ್ಯಮಾಪನ

- ಅಕ್ಷರ ಬರವಣಿಗೆಯ ವಿಧಾನ ಅನುಸರಿಸಲಾಗಿದೆಯೇ? (ಆರಂಭಿಸುವುದು, ಮುಂದುವರಿಸುವುದು, ಕೊನೆಗೊಳಿಸುವುದು)
- ಆಕಾರ ಮತ್ತು ಗಾತ್ರ ಸರಿಯಾಗಿದೆಯೇ
- ವೈಯಕ್ತಿಕ ಮೌಲ್ಯಮಾಪನ ನಡೆಸಿದ ಅನಂತರ ಬರೆಯಲು ಕಷ್ಟವೆನಿಸುವ ಮಕ್ಕಳಿಗೆ ಬರವಣಿಗೆಗೆ ಅಗತ್ಯವಾದ ಪೂರಕ ಚಟುವಟಿಕೆಗಳನ್ನು ಅಧ್ಯಾಪಿಕೆ ನೀಡಬೇಕು.

  ಉದಾ: ಮಗುವಿಗೆ ಇಷ್ಟವಾದ ಚಿತ್ರಗಳನ್ನು ಗೆರೆಗಳನ್ನು ವೃತ್ತಗಳನ್ನು ಸ್ಲೇಟಿನಲ್ಲಿ ಮಾಡಿಸುವುದು.

ಬರವಣಿಗೆಯಲ್ಲಿ ಹಿಂದುಳಿದ ಮಗುವಿಗೆ ನೀವು ನೀಡುವ ಚಟುವಟಿಕೆಗಳೇನು?

**ಚಿತ್ರ ಬಿಡಿಸುವ :**

ಮಕ್ಕಳು ತಮ್ಮ ಬರವಣಿಗೆ ಪುಸ್ತಕದಲ್ಲಿ ಮನೆ ಮತ್ತು ಮರದ ಚಿತ್ರ ಬಿಡಿಸಿ ಬಣ್ಣ ಹಚ್ಚಲಿ. ಪರಸ್ಪರ ಕೈ ಬದಲಾಯಿಸಿ ಯಾರ ಚಿತ್ರ ಉತ್ತಮ? ಯಾಕೆ? ಎಂದು ಮಕ್ಕಳು ಹೇಳಲಿ.

**ಆಟ ಆಡುವ :**

ತರಗತಿಯ ನೆಲದಲ್ಲಿ ಮನೆಯ ನಕ್ಷೆ ಬಿಡಿಸಿ ಅದರಲ್ಲಿ ಕಿಟಕಿ ಬಾಗಿಲುಗಳನ್ನು ಗುರುತಿಸಬೇಕು. ಮಕ್ಕಳು ನಕ್ಷೆಯ ಸುತ್ತಲೂ ಓಡಲಿ. ಟೀಚರ್ ಸೀಟಿ ಊದಿದಾಗ ಮಕ್ಕಳು ಬಾಗಿಲಿನ ಮೂಲಕ ಒಳಗೆ ಹೋಗಬೇಕು. ಬಾಗಿಲಿನ ಮೂಲಕ ಅಲ್ಲದೆ ಮನೆಯೊಳಗೆ ಹೋದವರು ಔಟು. ಇದೇ ರೀತಿ ಆಟ ಮುಂದುವರಿಸುವುದು. ಕೊನೆಗೆ ಉಳಿದವರನ್ನು ಅಭಿನಂದಿಸುವಿರಲ್ಲವೇ?

**ಚಿತ್ರ ಓದು :**

**ಪರಿಸರ : ಮನೆಯ ಪ್ರಯೋಜನಗಳನ್ನು ಹೇಳುವುದು.**

ಪಾಠಭಾಗದ ನಿರ್ಮಾಣ ಹಂತದಲ್ಲಿರುವ ಮನೆಯ ಚಿತ್ರವನ್ನು ಮಕ್ಕಳಲ್ಲಿ ಗಮನಿಸಲು ಹೇಳುವುದು.

♦ ಚಿತ್ರದಲ್ಲಿ ಪ್ರತಿಯೊಬ್ಬರು ಏನೇನು ಮಾಡುತ್ತಿದ್ದಾರೆ?

(ಅಡಿಪಾಯ, ಗೋಡೆ, ಕಿಟಕಿ ಬಾಗಿಲು, ತಾರಸಿ ಇತ್ಯಾದಿ ಉತ್ತರಗಳು ಬರುವಂತೆ ಅಧ್ಯಾಪಿಕೆ ಪ್ರಶ್ನೆಗಳನ್ನು ಮುಂದುವರಿಸಿ ಕೇಳುವುದು)

## ಹೇಳುವ

- ಈ ಮನೆ ಪೂರ್ತಿಯಾಗಲು ಏನೇನು ಬೇಕು?
- ಮಕ್ಕಳು ಮನೆ ಮನೆ ಮನೆ ಎಂಬ ಪದ್ಯದಲ್ಲಿ ಕೊಟ್ಟಿರುವ ವಿಚಾರಗಳನ್ನು ನೆನಪಿಸಿಕೊಳ್ಳಲಿ.
- ಮನೆಗೆ ಕಿಟಿಕಿ ಯಾಕೆ ಬೇಕು?
- ಮನೆಗೆ ಬಾಗಿಲು ಯಾಕೆ ಬೇಕು?
- ಮಾಡು ಇಲ್ಲದಿದ್ದರೆ ಏನಾಗಬಹುದು?
- ಮನೆ ಯಾಕೆ ಬೇಕು?

  – ಇತ್ಯಾದಿ ಪಾಠಭಾಗದ ಪ್ರಶ್ನೆಗಳಿಗೆ ಮಕ್ಕಳು ಬಾಯ್ದೆರೆಯಾಗಿ ಉತ್ತರಿಸಲಿ.

**ಬಿಸಿಲು, ಮಳೆ, ಚಳಿ, ಹಾಗೂ ಇತರ ಪ್ರಾಣಿಗಳಿಂದ ರಕ್ಷಣೆ ಪಡೆಯಲು ಮನೆ ಅಗತ್ಯ ಎಂದು ಅಧ್ಯಾಪಿಕೆ ಕ್ರೋಡೀಕರಿಸುವುದು.**

## ಬರೆಯುವ

- ಪಾಠಭಾಗದಲ್ಲಿ ಕೊಟ್ಟಿರುವ ಚಿತ್ರನೋಡಿ ಮಕ್ಕಳು ಬಾಯ್ದೆರೆಯಾಗಿ ಉತ್ತರಿಸಲಿ.
- ಹಾಡುವ ಅಭಿನಯಿಸುವ ಪದ್ಯದಿಂದ ಪದಗಳನ್ನು ಹುಡುಕಿ ಮಕ್ಕಳು ಉರುಟು ಹಾಕಲಿ.
- ಅಧ್ಯಾಪಿಕೆ ಕರಿಹಲಗೆಯಲ್ಲಿ ಬರೆಯುವುದು.
- ಮಕ್ಕಳು ಪಾಠಪುಸ್ತಕದ ಚಿತ್ರದ ಕೆಳಗಿರುವ ಸ್ಥಳದಲ್ಲಿ ಬರೆಯಲಿ

### ಮೌಲ್ಯಮಾಪನ

- ಅಧ್ಯಾಪಿಕೆ ಮಕ್ಕಳ ಬರವಣಿಗೆಯ ವೈಯಕ್ತಿಕ ಮೌಲ್ಯಮಾಪನ ನಡೆಸಬೇಕು.
- ತರಗತಿಯಲ್ಲಿ ಎಷ್ಟು ಮಂದಿ ಸರಿಯಾಗಿ ಬರೆದಿದ್ದಾರೆ?
- ಸ್ವತಃ ಬರೆದವರು ಎಷ್ಟು ಮಂದಿ?
- ಬರವಣಿಗೆಗೆ ಸಹಾಯ ಬೇಕಾದವರು ಎಷ್ಟು ಮಂದಿ?

E.V.S. (L.O.) ಮನೆಯಲ್ಲಿರುವ ವಿವಿಧ ರೀತಿಯ ಗೃಹೋಪಕರಣಗಳನ್ನು ಗುರುತಿಸುವುದು. ಉಪಯೋಗ ಹೇಳುವುದು.

**ಚಿತ್ರ ಓದು :**

- ಅರುಣನ ಅಡುಗೆ ಕೋಣೆಯಲ್ಲಿ ಏನೇನು ಇವೆ?
- ಅರುಣನ ಮನೆಯಲ್ಲಿ ಆಹಾರವನ್ನು ಬೇಯಿಸುವುದು ಹೇಗೆ?
- ನಿಮ್ಮ ಮನೆಯಲ್ಲಿ ಆಹಾರವನ್ನು ಬೇಯಿಸುವುದು ಹೇಗೆ?
- ನಿಮ್ಮ ಅಡುಗೆ ಕೋಣೆಯಲ್ಲಿ ಏನೇನು ಇವೆ?

  - ಎಂಬ ಪ್ರಶ್ನೆಗಳನ್ನು ಕೇಳುವುದು. ಮಕ್ಕಳು ಉತ್ತರಿಸಲಿ.

**ಓದುವ :**

ಅರುಣನ ಅಡುಗೆ ಮನೆ.... ಪಾಠಭಾಗವನ್ನು ಅಧ್ಯಾಪಿಕೆ ಕರಿಹಲಗೆಯಲ್ಲಿ ಬರೆದು pointer ನ ಸಹಾಯದಿಂದ ಪದವನ್ನು ಗುರುತಿಸಿ ಓದುವುದು. ಮಕ್ಕಳು ಗಮನಿಸಲಿ. ಕೆಲವರಿಂದ ಬಾಯ್ದೆರೆಯಾಗಿ ಓದಿಸುವುದು. ಅನಂತರ ಮಕ್ಕಳು ವೈಯಕ್ತಿಕವಾಗಿ ಓದಲಿ.

**ಮೌಲ್ಯಮಾಪನ**

ಮಕ್ಕಳು ಓದುವಾಗ ಅಧ್ಯಾಪಿಕೆ ಈ ಕೆಳಗಿನ ಅಂಶಗಳನ್ನು ಗಮನಿಸಬೇಕು.

- ಸ್ಪಷ್ಟವಾಗಿ ಓದುವುದು.
- ಉಚ್ಚಾರ ಸ್ಪಷ್ಟತೆಯೊಂದಿಗೆ ಓದುವುದು.
- ಆಶಯಗ್ರಹಣದೊಂದಿಗೆ ಓದುವುದು.

**ಹೇಳುವ :**

ಅಡುಗೆ ಮನೆಯಲ್ಲಿ ಏನೇನು ಇವೆ? ಮಕ್ಕಳು ಬಾಯ್ದೆರೆಯಾಗಿ ಹೇಳಲಿ.

**ಆಡುವ :**

ತರಗತಿಯಲ್ಲಿ ಮನೆಯ ನಕ್ಷೆ ಬಿಡಿಸಿ ಅದರಲ್ಲಿ ಗೆರೆ ಎಳೆದು ಕೋಣೆಗಳಾಗಿ ವಿಭಾಗಿಸುವುದು. ಅಧ್ಯಾಪಿಕೆ ಒಂದೊಂದು ಕೋಣೆಯಲ್ಲಿ ನಿಂತು ಒಂದೊಂದು ರೀತಿಯ ಅಭಿನಯ ಮಾಡುವುದು. (ಊಟ ಮಾಡುವುದು, ತರಕಾರಿ ಹೆಚ್ಚುವುದು, ಮಲಗುವುದು, ಸ್ನಾನ ಮಾಡುವುದು ಇತ್ಯಾದಿ...)

ಅಧ್ಯಾಪಿಕೆಯ ಅಭಿನಯವನ್ನು ನೋಡಿ ಮಕ್ಕಳು ಕೋಣೆಯನ್ನು ಹೆಸರಿಸಲಿ. ಮಕ್ಕಳು ಹೇಳದಿದ್ದರೆ ಅಧ್ಯಾಪಕರು ಹೇಳುವುದು. ಆಮೇಲೆ ಪಾಠಭಾಗದ ಬೇರೆ ಯಾವ ಕೋಣೆಗಳಿವೆ? ಎಂಬ ಪ್ರಶ್ನೆಯನ್ನು ಕೇಳುವುದು. ಉತ್ತರವನ್ನು ಕರಿಹಲಗೆಯಲ್ಲಿ ಬರೆದು ಓದಿಸುವುದು.

**ಬರೆಯುವ :**

ಪಾಠಭಾಗದಲ್ಲಿರುವ ಚಿತ್ರ ನೋಡಿ ಮಕ್ಕಳು ವಸ್ತುಗಳನ್ನು ಹೆಸರಿಸಲಿ. (ಒಲೆ, ಚಮಚ, ಕಾವಲಿ). ಮಕ್ಕಳು ಹೆಸರಿಸಿದಂತೆ ಅಧ್ಯಾಪಿಕೆ ಕರಿಹಲಗೆಯಲ್ಲಿ ಬರೆಯುವುದು. ಮಕ್ಕಳು ವೈಯಕ್ತಿಕವಾಗಿ ಓದಲಿ ಮತ್ತು ಪಾಠಪುಸ್ತಕದಲ್ಲಿ ಕೊಟ್ಟಿರುವ ಜಾಗದಲ್ಲಿ ಬರೆಯಲಿ.

ವೈಯಕ್ತಿಕ ಮೌಲ್ಯಮಾಪನ ನಡೆಸುವುದು.

**ಗುರುತಿಸುವುದು :**

ಈ ಚಟುವಟಿಕೆಯಲ್ಲಿ E Text ಬಳಸಬಹುದು. ಪಾಠಭಾಗದಲ್ಲಿ ಕೊಟ್ಟಿರುವ ಚಿತ್ರನಿರೀಕ್ಷಣೆ ಮಾಡಿ (ಅಡುಗೆ ಕೋಣೆಯ ಉಪಕರಣಗಳು, ಇತರ ಉಪಕರಣಗಳು) ಪ್ರತಿಯೊಂದನ್ನೂ ಮಕ್ಕಳು ಹೆಸರಿಸಲಿ. ಮಕ್ಕಳು ಆಡುಭಾಷೆಯಲ್ಲಿ ಹೇಳಿದರೆ ಅಧ್ಯಾಪಿಕೆ ಕನ್ನಡದಲ್ಲಿ ಸರಿಪಡಿಸಿ ಹೇಳಬೇಕು. ಚಿತ್ರದ ಕೆಳಗೆ ಕೊಟ್ಟಿರುವ ಹೆಸರುಗಳನ್ನು ಮಕ್ಕಳು ಗುಂಪಿನಲ್ಲಿ ಓದಿ ಮಂಡಿಸಲಿ. ಆಮೇಲೆ ಅಡುಗೆಕೋಣೆಯ ಉಪಕರಣಗಳಿಗೆ ಉರುಟು ಹಾಕಲು ಹೇಳುವುದು. ಮಕ್ಕಳು ಪರಸ್ಪರ ಮೌಲ್ಯಮಾಪನ ಮಾಡಲಿ. ಅಧ್ಯಾಪಕರು ಮೌಲ್ಯಮಾಪನ ಮಾಡುವುದು. ಮುಂದುವರಿದ

ಚಟುವಟಿಕೆಯಾಗಿ ಗುಂಪಿನಲ್ಲಿ ಅಡುಗೆ ಕೋಣೆಯ ಉಪಕರಣಗಳು ಮತ್ತು ಇತರ ಉಪಕರಣಗಳ ಚಿತ್ರ ನೀಡಿ ವರ್ಗೀಕರಿಸಲು ಹೇಳುವುದು.

**ಪರಿಸರ**

ಕಲಿಕಾ ಸಾಧನೆ : ಕುಟುಂಬದ ಸದಸ್ಯರು ಪರಸ್ಪರ ಅವಲಂಬಿಸಿ ಜೀವಿಸುತ್ತಾರೆ.

**ಗೆರೆ ಎಳೆದು ಸೂಚಿಸುವ**

ಪಾಠಭಾಗದಲ್ಲಿ ಕೊಟ್ಟಿರುವ ಚಿತ್ರಗಳನ್ನು, ಚಿತ್ರದ ಕೆಳಗೆ ಬರೆದಿರುವುದನ್ನು ಬೆರಳಿಟ್ಟು ತೋರಿಸಿ ಅಧ್ಯಾಪಿಕೆ ಓದುವುದು. ಆಮೇಲೆ ಕೊಟ್ಟಿರುವ ವಾಕ್ಯಗಳನ್ನು ಓದುವುದು. ಮಕ್ಕಳು ವೈಯಕ್ತಿಕವಾಗಿ ಓದಲಿ. ತರಗತಿಯ ಪ್ರತಿಯೊಬ್ಬ ಮಗುವೂ ಅವರವರ ಅಪ್ಪ, ಅಮ್ಮ, ಅಜ್ಜಿ, ಅಕ್ಕ ಮಾಡುವ ಕೆಲಸಗಳನ್ನು ಬಾಯ್ದೆರೆಯಾಗಿ ಹೇಳಲಿ. ಅನಂತರ ಮಕ್ಕಳು ತಾವು ಹೇಳಿದ ರೀತಿಯಲ್ಲಿ ಗೆರೆ ಎಳೆದು ಜೋಡಿಸಲಿ.

**ಪದ ಬರೆಯುವ :**

'ಅ' ಅಕ್ಷರದೊಂದಿಗೆ, ಪ್ರತಿಯೊಂದು ಅಕ್ಷರವನ್ನು ಜೋಡಿಸಿ ಪದಗಳನ್ನು ಮಕ್ಕಳು ಬಾಯ್ದೆರೆಯಾಗಿ ಹೇಳಲಿ. ಆಮೇಲೆ ಬರೆಯಲಿ. ಮಕ್ಕಳು ಕೈಬದಲಾಯಿಸಿ ಪರಸ್ಪರ ಮೌಲ್ಯಮಾಪನ ಮಾಡಲಿ. ಬಳಿಕ ಅಧ್ಯಾಪಿಕೆ ಮೌಲ್ಯಮಾಪನ ಮಾಡುವುದು.

- ಸರಿಯಾಗಿ ಬರೆದವರು ಎಷ್ಟು ಮಂದಿ?
- ಸಹಾಯ ಬೇಕಾದವರು ಎಷ್ಟು ಮಂದಿ?

**ಪರಿಸರ**

ಕಲಿಕಾ ಸಾಧನೆ : ಕುಟುಂಬದ ಸದಸ್ಯರು ಒಟ್ಟು ಸೇರುವ ಸಂದರ್ಭವಿದೆ ಎಂಬುದರ ಅರಿವು

**ಚಿತ್ರ ಓದು :**

ಆಖ್ಯಾನ ಮಂಡನೆಯ ಅನಂತರ ಕೇಳಬೇಕಾದ ಪ್ರಶ್ನೆಗಳು

- ಅರುಣ ಏನು ಮಾಡುತ್ತಿದ್ದಾನೆ?
- ಚಿತ್ರದಲ್ಲಿ ಏನು ಕಾಣಿಸುತ್ತಿದೆ?
- ಅರುಣನ ಹುಟ್ಟುಹಬ್ಬಕ್ಕೆ ಯಾರು ಯಾರು ಬಂದಿದ್ದರು?
- ನೀವು ಹುಟ್ಟುಹಬ್ಬವನ್ನು ಆಚರಿಸುವಿರಾ?
- ನಿಮ್ಮ ಮನೆಗೆ ಯಾರು ಯಾರು ಬರುತ್ತಾರೆ?

ಕುಟುಂಬದ ಸದಸ್ಯರು ಒಟ್ಟುಗೂಡುವ ಹಲವಾರು ಸಂದರ್ಭಗಳನ್ನು ಮಕ್ಕಳಿಂದ ವೈಯಕ್ತಿಕವಾಗಿ ಹೇಳಿಸಬೇಕು.

- ಮದುವೆ
- ಹುಟ್ಟುಹಬ್ಬ
- ಊರ ಜಾತ್ರೆ
-
-

**ಓದುವ :**

ಪದಗಳನ್ನು ಅಧ್ಯಾಪಿಕೆ ಕರಿಹಲಗೆಯಲ್ಲಿ ಬರೆಯುವುದು. ಒಂದೊಂದು ಪದವನ್ನು Pointerನಿಂದ ತೋರಿಸಿ ಓದಬೇಕು. 2ನೇ ಸಲ ಟೀಚರ್ ತೋರಿಸಿದ ಪದವನ್ನು ಮಗು ವೈಯಕ್ತಿಕವಾಗಿ ಓದಲಿ. (ಓದಿನ ವೈಯಕ್ತಿಕ ಮೌಲ್ಯಮಾಪನ). ಅನಂತರ ಪುಸ್ತಕ ಓದು. ಪ್ರತಿಯೊಬ್ಬರು ಗಟ್ಟಿಯಾಗಿ ಓದಲಿ. (ಉಚ್ಚಾರ ಸ್ಪಷ್ಟತೆಯ ಮೌಲ್ಯಮಾಪನ)

**ಬರೆಯುವ :**

ಓದುವ ಚಟುವಟಿಕೆಯಲ್ಲಿ ಕೊಟ್ಟಿರುವ ಪದಗಳಿಂದ ಅಕ್ಷರಗಳನ್ನು ಗುರುತಿಸಿ ಮಕ್ಕಳು ಈ ಚಟುವಟಿಕೆಯನ್ನು ಪೂರ್ತಿಗೊಳಿಸಲಿ.

ಆಖ್ಯಾನ ಮಂಡನೆಯ ನಂತರ 'ಹೇಳುವ' ಚಟುವಟಿಕೆಯನ್ನು ಮಾಡುವುದು.

**ಹೇಳುವ :**

ಪಾಠಭಾಗದ ಪ್ರಶ್ನೆಗಳಿಗೆ ಬಾಯ್ದೆರೆಯಾಗಿ ಉತ್ತರ ಹೇಳಿಸುವುದು.

ಪಾಠಭಾಗದ ಎರಡನೇ ಪ್ರಶ್ನೆಗೆ ಮಕ್ಕಳು ಬಾಯ್ದೆರೆಯಾಗಿ ಹೇಳುವಾಗ ಅಧ್ಯಾಪಿಕೆ ಕರಿಹಲಗೆಯಲ್ಲಿ ಬರೆದು ಮಕ್ಕಳಿಂದ ಓದಿಸುವುದು. ಕೊಟ್ಟಿರುವ ಚಿತ್ರದಲ್ಲಿರುವ ಜೀವಿಗಳನ್ನು ಮತ್ತು ವಾಸಸ್ಥಳಗಳನ್ನು ಬಾಯ್ದೆರೆಯಾಗಿ ಹೇಳಿಸುವುದು. ಅನಂತರ ಗೆರೆ ಎಳೆದು ಜೋಡಿಸುವ ಚಟುವಟಿಕೆಯನ್ನು ಮಕ್ಕಳಿಂದ ಮಾಡಿಸುವುದು. ಕ್ರಯೋನ್‌ಗಳನ್ನು ಬಳಸಿ ಗೆರೆ ಎಳೆಯುವುದು ಒಳ್ಳೆಯದು. ಮಕ್ಕಳು ಕೈಬದಲಾಯಿಸಿ ಮೌಲ್ಯಮಾಪನ ಮಾಡಲಿ.

ಆಖ್ಯಾನ : ಚಿನ್ನೂ..... ತರತರದ ಮನೆಗಳು

**ಪರಿಸರ**

ಕಲಿಕಾ ಸಾಧನೆ : ಹಲವು ವಿಧದ ಮನೆಗಳಿವೆ.

ಆಖ್ಯಾನ ಮಂಡನೆಯನಂತರ ಅಧ್ಯಾಪಿಕೆ ಮಕ್ಕಳಲ್ಲಿ ಅವರವರ ಮನೆಗಳ ಕುರಿತು ಹೇಳಿಸುವುದು. (ಹಂಚಿನ ಮನೆ, ತಾರಸಿ ಮನೆ, ಹುಲ್ಲಿನ ಮನೆ ...........)

ಆಮೇಲೆ ಆಖ್ಯಾನದೊಂದಿಗೆ ನೀಡಿರುವ ಮನೆಗಳನ್ನು ಗುರುತಿಸಿ ಹೆಸರಿಸಲು ಮಕ್ಕಳಲ್ಲಿ ಹೇಳುವುದು. ಮಕ್ಕಳು ಮಾತೃಭಾಷೆಯಲ್ಲಿ ಹೇಳಿದಾಗ ಅಧ್ಯಾಪಿಕೆ ಕನ್ನಡದಲ್ಲಿ ಹೇಳಿಕೊಡಬೇಕು. ಮುಂದುವರಿದ ಚಟುವಟಿಕೆಯಾಗಿ ಬಯಲು ಪ್ರವಾಸದ ಮೂಲಕ ತರತರದ ಮನೆಗಳನ್ನು ಪರಿಚಯಿಸುವುದು.

ಚಿನ್ನು ನೋಡಿದ ಮನೆಗಳು ಎಂಬ ಪಾಠಭಾಗದಲ್ಲಿ ಚಿತ್ರದೊಂದಿಗೆ ಕೊಟ್ಟಿರುವ ಪದಗಳನ್ನು ಮಕ್ಕಳಿಂದ ಓದಿಸುವುದು, ಬಿಟ್ಟ ಸ್ಥಳದಲ್ಲಿ ಬರೆಸುವುದು.

ಆಖ್ಯಾನದ ನಂತರ ಆಶಯಗ್ರಹಣ ಪ್ರಶ್ನೆಗಳನ್ನು ಕೇಳುವಿರಲ್ಲವೇ?

**ಪ್ರಶ್ನೆ ಕೇಳುವ :**

- ಚಿನ್ನು ಅತ್ತದ್ದು ಯಾಕೆ?
- ಚಿನ್ನುಗಿಳಿ ಅರುಣನೊಂದಿಗೆ ಏನು ಹೇಳಿತು?

**ಓದುವ :**

ಕೊಟ್ಟಿರುವ ಪಾಠಭಾಗವನ್ನು ಅಧ್ಯಾಪಿಕೆ ಕರಿಹಲಗೆ/ಚಾರ್ಟಿನಲ್ಲಿ ಬರೆದು ಓದುವುದು. ಮಕ್ಕಳು ಗಮನಿಸಲಿ. ಮಕ್ಕಳು ಪಾಠಭಾಗವನ್ನು ವೈಯಕ್ತಿಕವಾಗಿ ಓದಲಿ. ಆಮೇಲೆ ಗುಂಪಿನಲ್ಲಿ ಓದಿಸುವುದು. ಪುನಃ ಒಂದೊಂದು ವಾಕ್ಯವನ್ನು ಪ್ರತಿಯೊಬ್ಬರಿಂದಲೂ ಗಟ್ಟಿಯಾಗಿ ಓದಿಸಿ ಓದಿನ ಮೌಲ್ಯನಿರ್ಣಯ ನಡೆಸುವುದು.

**ಮೌಲ್ಯಮಾಪನ**

- ಎಲ್ಲರಿಗೂ ಓದಲು ಸಾಧ್ಯವಾಗಿದೆಯೇ?
- ಸಹಾಯ ಬೇಕಾದವರು ಎಷ್ಟು ಮಂದಿ?

**ಬರೆಯುವ :**

ಪಾಠಭಾಗದಲ್ಲಿ ಕೊಟ್ಟಿರುವ ಚಿತ್ರವನ್ನು ನೋಡಿ ಮಕ್ಕಳು ಸ್ವತಃ ಬರೆಯಲಿ. ಪರಸ್ಪರ ಕೈಬದಲಾಯಿಸಿ ನೋಡುವುದು.

ಅಧ್ಯಾಪಿಕೆ ಮಕ್ಕಳ ಬರವಣಿಗೆಯ ವೈಯಕ್ತಿಕ ಮೌಲ್ಯಮಾಪನ ನಡೆಸುವುದು.

**ಹಾಡುವ, ಅಭಿನಯಿಸುವ :**

ಈ ಪದ್ಯವನ್ನು ಆಸ್ವಾದನೆಗಾಗಿ ನೀಡಲಾಗಿದೆ. ಅಧ್ಯಾಪಿಕೆ ಪದ್ಯವನ್ನು Chart/ ಕರಿಹಲಗೆಯಲ್ಲಿ ಬರೆದು Pointer ಬಳಸಿ ಓದುವುದು. ಆಮೇಲೆ ರಾಗವಾಗಿ ಹಾಡುವುದು. ಮಕ್ಕಳು ಪುಸ್ತಕದಲ್ಲಿ ಸಾಲು ಗುರುತಿಸಿಕೊಂಡು ಹಾಡಲಿ. ಅನಂತರ ಅಧ್ಯಾಪಿಕೆ ಬಾಯ್ದೆರೆಯಾಗಿ ಅಭಿನಯದೊಂದಿಗೆ ಹಾಡುವುದು. ಮಕ್ಕಳು ಅನುಕರಿಸುವುದು. ಮುಂದುವರಿದು ಮಕ್ಕಳು ಗುಂಪಿನಲ್ಲಿ ಹಾಡಿ ಅಭಿನಯಿಸಲಿ.

**ಚಿತ್ರನೋಡಿ ಕಥೆ ಹೇಳುವ :**

ಪ್ರತಿಯೊಂದು ಚಿತ್ರದ ಆಶಯವನ್ನು ಮಕ್ಕಳಿಂದ ಹಂತ ಹಂತವಾಗಿ ಬಾಯ್ದೆರೆಯಾಗಿ ಹೇಳಿಸುವುದು. ಮಕ್ಕಳು ಹೇಳಿದ ವಾಕ್ಯವನ್ನು ಅಧ್ಯಾಪಿಕೆ ಸರಿಪಡಿಸಿ ಹೇಳಿ ಕರಿಹಲಗೆಯಲ್ಲಿ

ಬರೆಯುವುದು. ಆ ಮೇಲೆ ಅಧ್ಯಾಪಿಕೆ ಮಕ್ಕಳು ಹೇಳಿದ ವಾಕ್ಯಗಳನ್ನು ಸೇರಿಸಿ, ಅಗತ್ಯವಿದ್ದಲ್ಲಿ ಕ್ರಮೀಕರಿಸಿ ಕಥೆಯನ್ನು Chart ನಲ್ಲಿ ಅಥವಾ ಕರಿಹಲಗೆಯಲ್ಲಿ ಬರೆದು ಮಕ್ಕಳಿಂದ ಓದಿಸುವುದು.

**ಒಂದು ದೊಡ್ಡ ಮರ ಇತ್ತು. ಆ ಮರದ ಬಳಿಗೆ ಎರಡು ಹಕ್ಕಿಗಳು ಕಡ್ಡಿಗಳನ್ನು ಕಚ್ಚಿಕೊಂಡು ಹಾರಿಬಂದವು. ಆ ಹಕ್ಕಿಗಳು ಮರದಲ್ಲಿ ಗೂಡು ಕಟ್ಟಿದವು. ಗೂಡಿನಲ್ಲಿ ಮೊಟ್ಟೆ ಇಟ್ಟವು. ಮೊಟ್ಟೆ ಒಡೆದು ಮರಿಗಳು ಹೊರಗೆ ಬಂದವು. ತಾಯಿ ಹಕ್ಕಿ ಕಾಳು ತಂದು ಕೊಟ್ಟಿತು. ಒಂದು ದಿನ ಹಕ್ಕಿಗಳು ಕಾಳು ತರಲು ಹೊರಗೆ ಹೋದವು. ಆಗ ಒಂದು ಹಾವು ಮರಿಗಳನ್ನು ತಿನ್ನಲು ಗೂಡಿನ ಬಳಿಗೆ ಬಂತು. ಇದನ್ನು ಮರದಲ್ಲಿದ್ದ ಮಂಗ ನೋಡಿತು. ಅದು ಹಾವಿನ ಬಳಿಗೆ ಹಾರಿ ಹಾವಿನ ಬಾಲವನ್ನು ಹಿಡಿದು ಎಳೆಯಿತು. ಮರಿಗಳನ್ನು ಕಾಪಾಡಿತು.**

## ನಿರ್ಮಾಣ ಚಟುವಟಿಕೆ

ಮನೆ ನಿರ್ಮಿಸುವ : ಅಧ್ಯಾಪಿಕೆ ತರಗತಿಯಲ್ಲಿ ಕಡ್ಡಿಯಿಂದ ಮಾಡಿದ ಮನೆಯ ಮಾದರಿಯನ್ನು ಪ್ರದರ್ಶಿಸುವುದು.

ಕಡ್ಡಿಯಿಂದ ಮನೆ ತಯಾರಿ : ಪುಟ್ಟ ಮಕ್ಕಳಿಗೆ ಕೇವಲ ಕಡ್ಡಿಗಳಿಂದ ಮನೆ ತಯಾರಿಸುವುದು ಕಷ್ಟ. ಮಕ್ಕಳನ್ನು 3 ಯಾ 4 ಗುಂಪುಗಳಾಗಿ ಮಾಡುವುದು. ಚಾರ್ಟ್ ಪೇಪರನ್ನು ಆರು ಸಮಾನ ತುಂಡುಗಳನ್ನಾಗಿ ಮಾಡಿ ಗುಂಪಿನಲ್ಲಿ ನೀಡುವುದು. ಅದರಲ್ಲಿ ದೊಡ್ಡದಾಗಿ ಮನೆಯ ಚಿತ್ರವನ್ನು ಬಿಡಿಸುವಂತೆ ಮಕ್ಕಳಲ್ಲಿ ಹೇಳುವುದು. ಪ್ರತಿ ಗುಂಪಿಗೂ ಮಡಲ ಕಡ್ಡಿ ಮತ್ತು ಫೆವಿಕಾಲ್ ನೀಡಿ ಚಿತ್ರದ ಮೇಲೆ ಅಂಟಿಸಿ ಮನೆ ನಿರ್ಮಿಸಲು ಹೇಳುವುದು.

ಮನೆಕೆಲಸ : ವೈಯಕ್ತಿಕವಾಗಿ ಮಕ್ಕಳು ತಮ್ಮ ಚಟುವಟಿಕೆ ಪುಸ್ತಕದಲ್ಲಿ ಈ ಚಟುವಟಿಕೆಯನ್ನು ಮಾಡಲಿ.

## ಮನೆ ನಿರ್ಮಾಣದ ಇನ್ನೊಂದು ವಿಧಾನ

ಆಯತಾಕಾರದ ಪೆಟ್ಟಿಗೆಯ (ಚಾಕ್ ಪೆಟ್ಟಿಗೆಯನ್ನು ಬಳಸಬಹುದು) ಮೇಲೆ ದಪ್ಪದ ಚಾರ್ಟ್ ಅಥವಾ ರಟ್ಟನ್ನು ಮಧ್ಯದಲ್ಲಿ ಮಡಚಿ ಮಾಡಿನಂತೆ ಅಂಟಿಸಬೇಕು. ಮಡಲು

ಕಡ್ಡಿ/ಅಥವಾ ಐಸ್‌ಕ್ರೀಮ್ ಕಡ್ಡಿಗಳನ್ನು ಪೆಟ್ಟಿಗೆಯ ಸುತ್ತಲೂ, ಮಾಡಿಗೂ, ಅಗತ್ಯವಿರುವಷ್ಟು ಉದ್ದಕ್ಕೆ ತುಂಡುಮಾಡಿ ಅಂಟಿಸಬೇಕು. ಕಿಟಿಕಿ, ಬಾಗಿಲುಗಳಿರುವ ಜಾಗದಲ್ಲಿ ಕಿಟಿಕಿ ಬಾಗಿಲುಗಳ ಆಕಾರಕ್ಕೆ ತಕ್ಕಂತೆ ಕಡ್ಡಿಗಳನ್ನು ತುಂಡುಮಾಡಿ ಇರಿಸಬೇಕು.

## ಅಕ್ಷರಗಳನ್ನು ಜೋಡಿಸಿ ಪದ ಬರೆಯುವ

ಪಾಠಭಾಗದಲ್ಲಿ ಕೊಟ್ಟಿರುವ ಅಕ್ಷರಗಳ ಕಾರ್ಡುಗಳನ್ನು ಬರೆದು ಗುಂಪಿನಲ್ಲಿ ನೀಡುವುದು. ತರಗತಿಯ ಮಕ್ಕಳನ್ನು 3-4 ಗುಂಪುಗಳನ್ನಾಗಿ ಮಾಡುವುದು. ಗುಂಪಿಗೆ ನೀಡುವ cardಗಳನ್ನು ಜೋಡಿಸಿ ಮಕ್ಕಳು ಸೂಕ್ತವಾದ ಪದ ರಚಿಸಿ ಓದಿ ಹೇಳಲಿ. ಪ್ರತಿಯೊಂದು ಗುಂಪಿನ ಮಗುವಿಗೂ ಹೇಳಲು ಅವಕಾಶ ನೀಡಬೇಕು. ಮಕ್ಕಳು ಹೇಳಿದ ಪದಗಳನ್ನು ಅಧ್ಯಾಪಿಕೆ ಕರಿಹಲಗೆಯಲ್ಲಿ ಬರೆಯುವುದು. ಮಕ್ಕಳು ತಮ್ಮ ಪುಸ್ತಕಗಳಲ್ಲಿ ಬರೆದುಕೊಳ್ಳಲಿ. (ವೈಯಕ್ತಿಕ ಮೌಲ್ಯಮಾಪನ ನಡೆಸುವುದು)

# ಘಟಕ ಮೌಲ್ಯಮಾಪನ

45 ನಿಮಿಷಗಳು

I. ಬಿಟ್ಟ ಸ್ಥಳದಲ್ಲಿ ಅಕ್ಷರಗಳನ್ನು ಬರೆದು ಕೋಣೆಯಲ್ಲಿ ಪದ ಬರೆಯಿರಿ.

- ಆ ____ [ ]
- ____ ಲಿ [ ]
- ____ ರ [ ]
- ____ ಲೆ [ ]
- ____ ಮ್ಮ [ ]

II. ಕೊಟ್ಟಿರುವ ವಾಕ್ಯಗಳಲ್ಲಿ ಅ ಅಕ್ಷರವಿರುವ ಪದಗಳಿಗೆ ಉರುಟು ಹಾಕಿರಿ. ಆ ಪದಗಳನ್ನು ಬರೆಯಿರಿ.

ಅರುಣನ ಅಡುಗೆ ಮನೆ

ಅಮ್ಮ ಅಡುಗೆ ಮಾಡಿದರು.

ಅಜ್ಜಿ ಬಡಿಸಿದರು

ಅಪ್ಪ ಮತ್ತು ಅಜ್ಜ ಊಟ ಮಾಡಿದರು.

______ ______ ______ ______ ______ ______

III. ಪದ್ಯದಲ್ಲಿ ಬಿಟ್ಟಿರುವ ಸಾಲುಗಳನ್ನು ಪಾಠಪುಸ್ತಕದಿಂದ ಹುಡುಕಿ ಬರೆಯಿರಿ.

ಮನೆ ಮನೆ ಮನೆ

ನೋಡು ನನ್ನ ಮನೆ

ಗೋಡೆ ..................................

................................................

ಕಿಟಿಕಿ ......................................

................................................